**C**

**CCE PR**
**NSR & NSPR**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESHWARAM, BENGALURU – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಜೂನ್ / ಜುಲೈ, 2022**

**S.S.L.C. EXAMINATION, JUNE / JULY, 2022**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 29. 06. 2022 ] **ಸಂಕೇತ ಸಂಖ್ಯೆ : 33-K**

Date : 29. 06. 2022 ] **CODE NO. : 33-K**

## ವಿಷಯ : ದ್ವಿತೀಯ ಭಾಷೆ — ಕನ್ನಡ

## Subject : Second Language — KANNADA

**(ಖಾಸಗಿ ಅಭ್ಯರ್ಥಿ & ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Fresh & Private Repeater)**

**[ ಗರಿಷ್ಠ ಅಂಕಗಳು : 100**

**[ Max. Marks : 100**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| I. | **ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 5 × 1 = 5 |
| 1. | ಕನ್ನಡ ವರ್ಣಮಾಲೆಯಲ್ಲಿರುವ ಅವರ್ಗೀಯ ವ್ಯಂಜನಗಳ ಸಂಖ್ಯೆ<br>(ಎ) ಆರು (ಬಿ) ಏಳು<br>(ಸಿ) ಐದು (ಡಿ) ಒಂಬತ್ತು<br>***ಉತ್ತರ :*** (ಡಿ) ಒಂಬತ್ತು | |
| 2. | ವರ್ತಮಾನಕಾಲ ಸೂಚಕ ಪ್ರತ್ಯಯವಿದು<br>(ಎ) ದ (ಬಿ) ಉತ್ತ<br>(ಸಿ) ವ (ಡಿ) ಅನ್ನು<br>***ಉತ್ತರ :*** (ಬಿ) ಉತ್ತ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 3. | 'ಗುರುಗಳಿಂದ' ಪದದಲ್ಲಿರುವ ವಿಭಕ್ತಿಯ ಹೆಸರು<br>(ಎ) ಪ್ರಥಮ (ಬಿ) ದ್ವಿತೀಯ<br>(ಸಿ) ತೃತೀಯ (ಡಿ) ಚತುರ್ಥಿ<br>***ಉತ್ತರ :*** (ಸಿ) ತೃತೀಯ | |
| 4. | 'ಪಂಚಾಕ್ಷರಿ' ಪದದಲ್ಲಿರುವ ಸಂಧಿ<br>(ಎ) ಸವರ್ಣದೀರ್ಘ ಸಂಧಿ (ಬಿ) ಗುಣ ಸಂಧಿ<br>(ಸಿ) ಲೋಪ ಸಂಧಿ (ಡಿ) ಆಗಮ ಸಂಧಿ<br>***ಉತ್ತರ :*** (ಎ) ಸವರ್ಣದೀರ್ಘ ಸಂಧಿ | |
| 5. | 'ಅಂಕಿತನಾಮ'ಕ್ಕೆ ಉದಾಹರಣೆಯಾಗಿರುವ ಪದ<br>(ಎ) ನದಿ (ಬಿ) ಕಾವೇರಿ<br>(ಸಿ) ಶಿಕ್ಷಕ (ಡಿ) ಪರ್ವತ<br>***ಉತ್ತರ :*** (ಬಿ) ಕಾವೇರಿ | |
| II. | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ**<br>**(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) :** | $14 \times 1 = 14$ |
| 6. | ವಿಷದ ಬಾಣವು ಮರಕ್ಕೆ ಏಕೆ ತಗುಲಿತು ?<br>***ಉತ್ತರ :***<br>ಜಿಂಕೆಯು ಹಾರಿ ತಪ್ಪಿಸಿಕೊಂಡಿದ್ದರಿಂದ ವಿಷದ ಬಾಣವು ಮರಕ್ಕೆ ತಗುಲಿತು. | |
| 7. | ದೇಶದ ಉದ್ಧಾರ ಯಾರು ಯಾರನ್ನು ಅವಲಂಬಿಸಿದೆ ಎಂದು ಲೇಖಕರು ಹೇಳಿದ್ದಾರೆ ?<br>***ಉತ್ತರ :***<br>ದೇಶದ ಉದ್ಧಾರ ಅಸಿ, ಮಸಿ, ಕೃಷಿ (ಯೋಧ, ಸಾಹಿತಿ, ರೈತ)ಯನ್ನು ಅವಲಂಬಿಸಿದೆ ಎಂದು ಲೇಖಕರು ಹೇಳಿದ್ದಾರೆ. | |
| 8. | ಪುಟ್ಟರಾಜರ ತಂದೆ ತಾಯಿಯರ ಹೆಸರೇನು ?<br>***ಉತ್ತರ :***<br>ಪುಟ್ಟರಾಜರ ತಂದೆಯ ಹೆಸರು ರೇವಣ್ಣಯ್ಯ, ತಾಯಿಯ ಹೆಸರು ಸಿದ್ಧಮ್ಮ. | |
| 9. | ಪುಟ್ಟರಾಜರ ತಾಯಿ ಪಂಚಾಕ್ಷರಿ ಗವಾಯಿಗಳಲ್ಲಿ ಏನೆಂದು ಬೇಡಿಕೊಂಡಳು ?<br>***ಉತ್ತರ :***<br>ತಾಯಿ ಸಿದ್ಧಮ್ಮ ಪಂಚಾಕ್ಷರಿ ಗವಾಯಿಗಳ ಪಾದಕ್ಕೆರಗಿ, ಸೆರಗೊಡ್ಡಿ ಮಗನನ್ನು ಮನೆಗೆ ಕಳುಹಿಸಿಕೊಡುವಂತೆ ಬೇಡಿಕೊಂಡಳು. | |
| 10. | ಹಕ್ಕಿಗೂಡಿನಲ್ಲಿ ಯಾವುದರ ಸಮನ್ವಯತೆ ಇದೆ ?<br>***ಉತ್ತರ :***<br>ಹಕ್ಕಿಗೂಡಿನಲ್ಲಿ ಕಲಾವಿದನ ಸ್ವೋಪಜ್ಞತೆ, ವಿಜ್ಞಾನಿಯ ತಂತ್ರಜ್ಞಾನ ಸಮನ್ವಯಗೊಂಡಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 11. | ವಿದ್ಯಾರ್ಥಿಗಳು ಕಾಫಿ ಕುಡಿಯಲು ಎಂತಹ ಕಪ್ಪುಗಳನ್ನು ಆರಿಸಿಕೊಂಡರು ?<br>*ಉತ್ತರ :*<br>ವಿದ್ಯಾರ್ಥಿಗಳು ಕಾಫಿ ಕುಡಿಯಲು ಬೆಲೆಬಾಳುವ ಕಪ್ಪುಗಳನ್ನು ಆರಿಸಿಕೊಂಡರು. | |
| 12. | ಗೋಪಾಲನು ಹೊಸ ಪಂಚೆಯನ್ನು ಬಯಸಿದುದೇಕೆ ?<br>*ಉತ್ತರ :*<br>ಗೋಪಾಲನ ಪಂಚೆಯನ್ನು ನೋಡಿ ಗೆಳೆಯರೆಲ್ಲರೂ ಹಾಸ್ಯ ಮಾಡುತ್ತಿದ್ದುದರಿಂದ ಅವನು ಹೊಸ ಪಂಚೆಯನ್ನು ಬಯಸಿದನು. | |
| 13. | ಏಣಿಗೆ ಏಕೆ ಬೀಳುವ ಭಯವಿಲ್ಲ ?<br>*ಉತ್ತರ :*<br>ಗಟ್ಟಿ ನೆಲದಲ್ಲಿ ಕಾಲೂರಿ ನಿಂತದ್ದರಿಂದ ಏಣಿಗೆ ಬೀಳುವ ಭಯವಿಲ್ಲ. | |
| 14. | ಕವಿ ಮಾನವನ ಬದುಕನ್ನು ಇಬ್ಬನಿಗೆ ಏಕೆ ಹೋಲಿಸಿದ್ದಾರೆ ?<br>*ಉತ್ತರ :*<br>ರವಿಯ ಕಿರಣಗಳಿಗೆ ಹೇಗೆ ಇಬ್ಬನಿಯು ಮೌನವಾಗಿ ಕರಗಿ ಹೋಗುತ್ತದೆಯೋ ಹಾಗೆ ಮಾನವನ ಬದುಕು ಇರಬೇಕೆಂದು ಕವಿ ಹೇಳಿದ್ದಾರೆ. | |
| 15. | ಮನಸ್ಸು ಅಳಿಯಾಸೆಗಳ ಸುಳಿಗೆ ಸಿಲುಕಬಾರದು ಏಕೆ ?<br>*ಉತ್ತರ :*<br>ಮನಸ್ಸು ಅಳಿಯಾಸೆಗಳ ಸುಳಿಗೆ ಸಿಲುಕಿದರೆ ನೆಲೆಯಿರದೇ ತೊಳಲುತ್ತದೆ. | |
| 16. | ಕುಣಿಗಲ್ ಕೆರೆಯ ವೈಭವವನ್ನು ಹೆಚ್ಚಿಸಿದ ಅಂಶಗಳು ಯಾವುವು ?<br>*ಉತ್ತರ :*<br>ಮೂಡಲ್ ಕುಣಿಗಲ್ ಕೆರೆಯ ಸಂತೆ ಹಾದಿಯ ಸುಂದರ ಕಲ್ಲುಕಟ್ಟೆಯ ಸೌಂದರ್ಯ ಹಾಗೂ ಕೆರೆಯಲ್ಲಿ ಮೂಡಿ ಬರುವ ಚಂದ್ರಮನ ಸೊಬಗು ಇವೆಲ್ಲವೂ ಮೂಡಲ್ ಕುಣಿಗಲ್ ಕೆರೆಯ ವೈಭವವನ್ನು ಹೆಚ್ಚಿಸಿವೆ. | |
| 17. | ಧನವಿದ್ದವರಲ್ಲಿ ಇರಬೇಕಾದ ಗುಣ ಯಾವುದು ?<br>*ಉತ್ತರ :*<br>ಧನವಿದ್ದವರಲ್ಲಿ ಇರಬೇಕಾದ ಗುಣ ದಯೆ. | |
| 18. | ಕೌರವನ ಸೇನೆಯು ಉತ್ತರನಿಗೆ ಹೇಗೆ ಕಾಣಿಸಿತು ?<br>*ಉತ್ತರ :*<br>ಕೌರವರ ಸೇನೆಯು ಉತ್ತರನಿಗೆ ಬಲಗಡಲಿನಂತೆ (ವಿಶಾಲ ಸಾಗರ) ಕಾಣಿಸಿತು. | |
| 19. | ಯುದ್ಧಕ್ಕೆ ಬೆನ್ನು ಹಾಕಿದರೆ ಏನು ಪ್ರಾಪ್ತಿಯಾಗುತ್ತದೆ ?<br>*ಉತ್ತರ :*<br>ಯುದ್ಧಕ್ಕೆ ಬೆನ್ನು ಹಾಕಿದರೆ ನರಕ / ಪಾತಕ (ಪಾಪ) ಪ್ರಾಪ್ತಿಯಾಗುತ್ತದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| III. | **ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕಗಳು) :** | 12 × 2 = 24 |
| 20. | ರೈತರು ಎದುರಿಸುತ್ತಿರುವ ಸಮಸ್ಯೆಗಳು ಯಾವುವು ?<br>***ಉತ್ತರ :***<br>ರೈತರು ಒಂದೆಡೆ ನಿಸರ್ಗದ ಜೊತೆಗೆ ಸೆಣಸಬೇಕು. ಸಕಾಲಕ್ಕೆ ಸರಿಯಾಗಿ ಮಳೆ ಬರುವುದಿಲ್ಲ. ಉತ್ತಮ ಬೀಜ ಸಿಗುವುದಿಲ್ಲ. ಭೂಮಿ ಬರಡಾಗುತ್ತಿದೆ. ಕ್ರಿಮಿಕೀಟಗಳ ಹಾವಳಿಯಿಂದ ಬೆಳೆಗೆ ವಿವಿಧ ರೀತಿಯ ರೋಗಗಳು ಬರಬಹುದು. ಇಲ್ಲವೇ ಅತಿವೃಷ್ಟಿಯಿಂದ ಬೆಳೆನಾಶವಾಗಬಹುದು. ಮತ್ತೊಂದೆಡೆ ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದೇ ಇರಬಹುದು ಇಂತಹ ಹಲವಾರು ಸಮಸ್ಯೆಗಳನ್ನು ರೈತರು ಎದುರಿಸುತ್ತಿದ್ದಾರೆ. | |
| 21. | ಬಾಲಕ ಪುಟ್ಟಯ್ಯ ಪಂಚಾಕ್ಷರಿ ಗವಾಯಿಗಳ ಶಿಷ್ಯನಾದುದು ಹೇಗೆ ?<br>***ಉತ್ತರ :***<br>ಸಂಗೀತ ಲೋಕದ ಜಗದ್ಗುರು ಪಂಡಿತ ಪಂಚಾಕ್ಷರ ಗವಾಯಿಗಳ 'ಸಂಗೀತ ಪಾಠಶಾಲೆ' ಒಮ್ಮೆ ಗವಿಮಠದಲ್ಲಿ ಕ್ಯಾಂಪ್ (ವಾಸ) ಮಾಡಿತ್ತು. ಅಲ್ಲಿಗೆ ಮಾವನವರೊಂದಿಗೆ ಪುಟ್ಟಯ್ಯನು ಬಂದು ಗುರುಗಳಾದ ಪಂಚಾಕ್ಷರ ಗವಾಯಿಗಳ ಶಿಷ್ಯತ್ವ ಸ್ವೀಕರಿಸಿ, ಪ್ರೀತಿಯ ಶಿಷ್ಯರಲ್ಲಿ ಈತನೂ ಒಬ್ಬನಾದನು. | |
| 22. | ವಿಶೇಷ ಚೇತನರಿಗೆ ನೀವು ಯಾವ ಮಾತುಗಳಿಂದ ಧೈರ್ಯ ತುಂಬುವಿರಿ ?<br>***ಉತ್ತರ :***<br>ಉನ್ನತವಾದ ಗುರಿಯನ್ನು ಸಾಧಿಸಲು ಅಂಗವೈಕಲ್ಯತೆಯು ಯಾವುದೇ ರೀತಿಯ ಅಡ್ಡಿಯುಂಟುಮಾಡಲಾರದು ಇದಕ್ಕೆ ಪಂಡಿತ ಪುಟ್ಟರಾಜ ಗವಾಯಿಗಳೇ ಉತ್ತಮ ಉದಾಹರಣೆ. ಸಾಧಿಸಬೇಕೆಂಬ ಛಲವಿದ್ದರೆ ಗುರಿ ಸಾಧನೆ ಸುಲಭವಾಗುತ್ತದೆ. ಅಂಗವೈಕಲ್ಯತೆಯನ್ನು ಸವಾಲಾಗಿ ಸ್ವೀಕರಿಸಿ ಸಾಧನೆಯ ಮೆಟ್ಟಿಲನ್ನು ಏರಿದವರ ಯಶೋಗಾಥೆಯನ್ನು ತಿಳಿಸಬೇಕು. ನಿಮ್ಮ ಜೀವನದಲ್ಲಿ ನಿರ್ದಿಷ್ಟ ಗುರಿಯನ್ನು ಹೊಂದಿ ಅದರ ಸಾಧನೆಗೆ ಹಗಲಿರುಳು ಶ್ರಮಿಸಬೇಕು. ಆಗ ಜೀವನ ಸಾರ್ಥಕತೆಯನ್ನು ಪಡೆದುಕೊಳ್ಳುತ್ತದೆ ಎಂದು ಹೇಳುವ ಮೂಲಕ ವಿಶೇಷ ಚೇತನರಲ್ಲಿ ಆತ್ಮವಿಶ್ವಾಸವನ್ನು ಮೂಡಿಸಬೇಕು. | |
| 23. | ಹಕ್ಕಿಗೂಡಿನಲ್ಲಿ ಬದುಕಿನ ಯಾವ ಯಾವ ಅನುಭವಗಳಿವೆ ?<br>***ಉತ್ತರ :***<br>ಹಕ್ಕಿಗೂಡಿನಲ್ಲಿ ನೋವಿದೆ, ನಲಿವಿದೆ, ಆಕ್ರಂದನವಿದೆ. ಸಂತಸದ ದನಿಯಿದೆ. ಕಾವು, ಗುಟುಕು ಪಡೆದು ಜೀವ ಕಣ್ತೆರೆವ ಸೃಷ್ಟಿಯ ಅಚ್ಚರಿಯಿದೆ. ಶತ್ರುಗಳ ಬೇಟೆಗೆ ಅಥವಾ ನೈಸರ್ಗಿಕ ವಿಕೋಪಕ್ಕೆ ತುತ್ತಾಗುವ ದಾರುಣವಿದೆ. ಅವಘಡಗಳನ್ನು ಎದುರಿಸಿ ಬದುಕುವ ಸಾಹಸಗಾಥೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಅಲ್ಲಿ ಕಾಣುತ್ತದೆ. ಕಲಾವಿದನ ಸ್ವೋಪಜ್ಞತೆ, ವಿಜ್ಞಾನಿಯ ತಂತ್ರಜ್ಞಾನ ಅಲ್ಲಿ ಸಮನ್ವಯಗೊಂಡಿದೆ. ಹುಟ್ಟಿದ ಮಕ್ಕಳಿಗೆ ಬದುಕಿನ ಪಾಠ ಹೇಳುವ ಶಾಲೆ ಅದು. | |
| 24. | ಹಕ್ಕಿಗಳು ಗೂಡನ್ನು ನಿರ್ಮಿಸುವ ಉದ್ದೇಶವೇನು ? <br> ***ಉತ್ತರ :*** <br> ಹಕ್ಕಿಗಳು ಗೂಡನ್ನು ನಿರ್ಮಿಸುವುದು ಮುಖ್ಯವಾಗಿ ರಕ್ಷಣೆಗಾಗಿ. ಶೀತಗಾಳಿ, ಬಿರುಗಾಳಿ, ಮಳೆ, ಪ್ರವಾಹಗಳ ವಿರುದ್ಧ ಬದುಕಲು ಅವುಗಳಿಗೆ ಗೂಡು ಬೇಕು. ಮರುಭೂಮಿಯಂಥ ಪ್ರದೇಶಗಳಲ್ಲಿ ಮರಳಿನ ಹೊಡೆತ, ಪ್ರಖರ ಸೂರ್ಯರಶ್ಮಿ ಮುಂತಾದ ಹವಾಮಾನ ವೈಪರೀತ್ಯಗಳನ್ನು ಪ್ರತಿರೋಧಿಸಲು ಗೂಡು ಬೇಕು. ಮೊಟ್ಟೆ ಮರಿಗಳನ್ನು ರಕ್ಷಿಸಿಕೊಳ್ಳಲು, ತಮ್ಮನ್ನು ಬೇಟೆಯಾಡುವ ಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ಗೂಡುಗಳನ್ನು ನಿರ್ಮಿಸುತ್ತವೆ. | |
| 25. | ಹೆಡ್ ಮಾಸ್ತರರು ತಂದಿಟ್ಟ ಟ್ರೇನಲ್ಲಿ ಯಾವ ಯಾವ ತರಹದ ಕಪ್ಪುಗಳಿದ್ದವು ? <br> ***ಉತ್ತರ :*** <br> ಗುರುಗಳು ತಂದಿಟ್ಟ ಟ್ರೇಗಳಲ್ಲಿ ಕೆಲವು ಅತ್ಯಂತ ಬೆಲೆಬಾಳುವಂತಹವು. ಚೈನಾ ಪಿಂಗಾಣಿಗಳು, ಕೆಲವು ಸುಂದರ ಗಾಜಿನವು ಮತ್ತು ಕೆಲವು ಸ್ಟೀಲಿನ ಲೋಟಗಳು. ಕೆಲವು ಪ್ಲಾಸ್ಟಿಕ್ ಕಪ್ಪುಗಳು ಇನ್ನೂ ಕೆಲವು ಏನೂ ಬೆಲೆ ಬಾಳದ ಗಾಜಿನ ಲೋಟಗಳಿದ್ದವು. | |
| 26. | ಸಿದ್ಧಾರ್ಥನಿಗೆ ನಾಡಿನ ಅರ್ಥ ತಿಳಿದ ಸಂದರ್ಭವನ್ನು ಕವಿ ಬಸವರಾಜ ಸಬರದ ಏನೆಂದು ಬಣ್ಣಿಸಿದ್ದಾರೆ ? <br> ***ಉತ್ತರ :*** <br> ಕಾಡು ಕಾಡುಗಳನ್ನು ಅಲೆದ ಸಿದ್ಧಾರ್ಥನಿಗೆ ನಾಡಿನ ಅರ್ಥ ತಿಳಿಯಿತು. ದೂರದಲ್ಲಿ ಕೋಗಿಲೆಯ ಇಂಪಾದ ಹಾಡು ಕೇಳಿದಂತೆ ಭಾಸವಾಯಿತು. ಬಾನಿನಲ್ಲಿ ಬೆಳ್ಳಿಚುಕ್ಕಿಗಳು ಬೆಳಗಿದಂತೆ ಕಂಡುಬಂದವು. ಇಂತಹ ಸಂದರ್ಭದಲ್ಲಿ ಬೋಧಿವೃಕ್ಷದಲ್ಲಿ ಮಹಾ ಬೆಳಕು ಮೂಡಿ ಸಿದ್ಧಾರ್ಥನಿಗೆ ಜ್ಞಾನೋದಯವಾಯಿತು. ತಪಸ್ಸಿಗಿಂತ ನಾಡಿನ ಜನರ ಜೀವಪ್ರೀತಿ ದೊಡ್ಡದು ಎಂಬ ಸತ್ಯದ ಅರಿವಾಯಿತು ಎಂಬುದನ್ನು ಕವಿ ಈ ರೀತಿ ಬಣ್ಣಿಸಿದ್ದಾರೆ. | |
| 27. | ಮಾನವನ ಬದುಕು ಕರ್ಪೂರದಂತೆ ಇರಬೇಕು ಎಂದು ಕವಿ ಸಿ.ಪಿ.ಕೆ. ಏಕೆ ಹೇಳಿದ್ದಾರೆ ? <br> ***ಉತ್ತರ :*** <br> ಕರ್ಪೂರವು ಮೌನವಾಗಿ ಕರಗುವುದಲ್ಲದೇ ಆ ಅಲ್ಪಸಮಯದಲ್ಲಿ ಅಗಾಧವಾದ ಪರಿಮಳವನ್ನು ಉಜ್ವಲವಾದ ಬೆಳಕನ್ನು ನೀಡುತ್ತದೆ. ಅವಶೇಷವನ್ನು ಉಳಿಸದೇ ಉರಿಯುವ ಕರ್ಪೂರದಂತೆ ಶಾಂತಿಯಿಂದ, ಸಹನೆಯಿಂದ ನಮ್ಮ ಕರ್ತವ್ಯವನ್ನು ಮುಗಿಸಬೇಕು, ಕೂಗಾಡಿ ಹಾರಾಡುವುದರಿಂದ ಯಾವುದೇ ಪ್ರಯೋಜನವಿಲ್ಲ ಎಂದು ಕವಿ ಈ ಉದಾಹರಣೆಯ ಮೂಲಕ ಹೇಳಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 28. | ಬಸವಣ್ಣನವರು ಜನರ ಧಾರ್ಮಿಕ ನಂಬಿಕೆಗಳನ್ನು ಏಕೆ ಖಂಡಿಸಿದ್ದಾರೆ ?<br>***ಉತ್ತರ :***<br>ಬಸವಣ್ಣನವರು ನೀರ ಕಂಡಲ್ಲಿ ಮುಳುಗುವ, ಮರನ ಕಂಡಲ್ಲಿ ಸುತ್ತುವ, ಬತ್ತುವ ಜಲವನ್ನು ಒಣಗುವ ಮರವನ್ನು ಪೂಜಿಸುವ ಮೌಢ್ಯ ಆಚರಣೆಗಳನ್ನು ಖಂಡಿಸುತ್ತಾರೆ. ಜನಸಾಮಾನ್ಯರಲ್ಲಿ ವೈಚಾರಿಕತೆಯನ್ನು, ವೈಚಾರಿಕ ಪ್ರಜ್ಞೆಯನ್ನು ಮೂಡಿಸಬಯಸಿದರು. ವರ್ಗರಹಿತ, ವರ್ಣರಹಿತ ಸಮಾಜವನ್ನು ಕಟ್ಟಬಯಸಿದ ಬಸವಣ್ಣನವರು ಅರ್ಥವಿಲ್ಲದ ಧಾರ್ಮಿಕ ಆಚರಣೆಗಳನ್ನು ಖಂಡಿಸಿದ್ದಾರೆ. ಸರ್ವಸಮಾನತೆಯ ಕಾಯಕತತ್ವವನ್ನು ಪ್ರತಿಪಾದಿಸಿದ್ದಾರೆ. | |
| 29. | 'ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ' ಈ ಮಾತಿನ ವೈಶಿಷ್ಟ್ಯವೇನು ?<br>***ಉತ್ತರ :***<br>ಅಕ್ಕ ಮಹಾದೇವಿಯವರ ಈ ವಚನದಲ್ಲಿ ಮರವು ನೆರಳನ್ನು ನೀಡದೇ ಹೋದರೆ ಆ ಮರವಿದ್ದು ಪ್ರಯೋಜನವಿಲ್ಲ. ಹಾಗೆಯೇ ಧನವಿದ್ದವನಲ್ಲಿ ಮುಖ್ಯವಾಗಿ ದಯೆಯಿರಬೇಕು. ಹಸುವಿನಲ್ಲಿ ಹಯನಿರಬೇಕು. ತಟ್ಟೆಯಲ್ಲಿ ಊಟವಿರಬೇಕು. ರೂಪವಿದ್ದವನಲ್ಲಿ ಮುಖ್ಯವಾಗಿ ಇರಬೇಕಾದುದು ಉತ್ತಮವಾದ ಗುಣ. ಮನುಷ್ಯನಾಗಿ ಹುಟ್ಟಿದ ಮೇಲೆ ದೈವದ ಅಸ್ತಿತ್ವವನ್ನು ಅರಿತಿರಬೇಕು ಎಂಬುದೇ ಈ ಮಾತಿನ ವೈಶಿಷ್ಟ್ಯವಾಗಿದೆ. | |
| 30. | ವೈದ್ಯರು ತಮ್ಮ ವೃತ್ತಿಯ ಬಗ್ಗೆ ಹೆಂಡತಿ ರತ್ನಳಿಗೆ ಹೇಳಿದ ಮಾತುಗಳು ಯಾವುವು ?<br>***ಉತ್ತರ :***<br>ಈ ವೈದ್ಯರ ವೃತ್ತಿ ದುಡ್ಡು ಗಳಿಸಬೇಕಾದುದಲ್ಲ. ಕೇವಲ ಸಮಾಜದ ಕ್ಷೇಮ ಸಾಧನೆಗಾಗಿ ಇರುವುದು. ಸಮಾಜದಿಂದ ನಮಗೆ ಬದುಕಿ ಇರುವ ಮಟ್ಟಿಗೆ ಏನಾದರೂ ದೊರೆತರೆ ಸಾಕು ಎಂದು ವೈದ್ಯರು ತಮ್ಮ ಹೆಂಡತಿ ರತ್ನಳಿಗೆ ಹೇಳಿದರು. | |
| 31. | ವೈದ್ಯರು ಭೀಮನಾಯಕನ ಮಗುವಿನ ಪ್ರಾಣವನ್ನು ಉಳಿಸಿದ ಬಗೆಯನ್ನು ತಿಳಿಸಿ.<br>***ಉತ್ತರ :***<br>ವೈದ್ಯರು ಭೀಮನಾಯಕನ ಮಗುವಿನ ನಾಡಿಯನ್ನು ಹಿಡಿದು ಜ್ವರದ ರೀತಿಯನ್ನು ಪರೀಕ್ಷಿಸಿದರು. ಪಂಜಿನವರೊಂದಿಗೆ ತಾವೇ ಸ್ವತಃ ಕಾಡಿಗೆ ಹೋಗಿ ಕಲ್ಲು, ಮುಳ್ಳು ತುಳಿಯುತ್ತ ರಾತ್ರಿಯೆಲ್ಲ ಅಲೆದಾಡಿ ಅವಶ್ಯವಾಗಿ ಬೇಕಾದ ಔಷಧಿಯ ಸೊಪ್ಪನ್ನು ಹುಡುಕಿ ತಂದರು. ಸೊಪ್ಪಿನ ರಸ ಮಾಡಿ ಔಷಧಿಯೊಂದಿಗೆ ಕುಡಿಸಿ ಕುಪ್ಪಿಯಲ್ಲಿದ್ದ ಲೇಹವನ್ನು ಹಣೆಗೆ ಬಳಿದು ಆರೈಕೆ ಮಾಡಿ ಮಗುವಿನ ಪ್ರಾಣವನ್ನು ಉಳಿಸಿದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| IV. | **ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | 2 × 3 = 6 |
| | ಜನ್ಮಸ್ಥಳ, ಕಾಲ | 1 ಅಂಕ |
| | ಕೃತಿಗಳು, ಪ್ರಶಸ್ತಿ | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |

32. ಅ.ರಾ. ಮಿತ್ರ :

***ಉತ್ತರ :***

ಅ.ರಾ. ಮಿತ್ರ ಅವರು ೧೯೩೫ ರಲ್ಲಿ ಮಂಡ್ಯ ಜಿಲ್ಲೆಯ ಅಕ್ಕಿಹೆಬ್ಬಾಳು ಎಂಬಲ್ಲಿ ಜನಿಸಿದರು. ಇವರ ಪೂರ್ಣ ಹೆಸರು ಅಕ್ಕಿಹೆಬ್ಬಾಳು ರಾಮಣ್ಣ ಮಿತ್ರ. ಖ್ಯಾತ ವಾಗ್ಮಿಗಳಾದ ಇವರು ಕನ್ನಡದಲ್ಲಿ ಸ್ನಾತಕೋತ್ತರ ಶಿಕ್ಷಣವನ್ನು ಪಡೆದು ಉಪನ್ಯಾಸಕರಾಗಿ, ಬಳಿಕ ರೀಡರ್ ಇತ್ಯಾದಿ ಸೇವೆ ಸಲ್ಲಿಸಿದವರು.

'ನಾನೇಕೆ ಕೊರೆಯುತ್ತೇನೆ ಮತ್ತು ಇತರ ಪ್ರಬಂಧಗಳು', 'ಛಂದೋಮಿತ್ರ', 'ಕನ್ನಡ ಮೇಘದೂತ', 'ಮಹಾಭಾರತದ ಪಾತ್ರ ಸಂಗತಿಗಳು', 'ಕವಿಗಳ ಬೆನ್ನೇರಿ' ಇತ್ಯಾದಿ ಕೃತಿಗಳನ್ನು ರಚಿಸಿದ್ದಾರೆ.

ಇವರಿಗೆ ನವರತ್ನರಾಂ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಕಾವ್ಯಾನಂದ ಪುರಸ್ಕಾರ ಇವೇ ಮೊದಲಾದ ಪ್ರಶಸ್ತಿಗಳು ಲಭಿಸಿವೆ.

33. ಎಂ. ಗೋಪಾಲಕೃಷ್ಣ ಅಡಿಗ :

***ಉತ್ತರ :***

ಎಂ. ಗೋಪಾಲಕೃಷ್ಣ ಅಡಿಗರು ೧೯೧೮ ರಲ್ಲಿ ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಮೊಗೇರಿ ಎಂಬಲ್ಲಿ ಜನಿಸಿದರು. ನವ್ಯ ಪ್ರಕಾರದ ಪ್ರಸಿದ್ಧ ಕವಿಗಳಾಗುತ್ತ ಬೆಳೆದವರು.

'ಭಾವತರಂಗ', 'ಚಂಡೆಮದ್ದಳೆ', 'ಭೂಮಿಗೀತ', 'ನಡೆದುಬಂದ ದಾರಿ' ಮೊದಲಾದ ಕವನ ಸಂಕಲನಗಳು. 'ಆಕಾಶ ದೀಪ', 'ಅನಾಥೆ' ಕಾದಂಬರಿಗಳು, ಇವರ ಸಮಗ್ರ ಗದ್ಯವು ಕನ್ನಡ ಗದ್ಯಸಾಹಿತ್ಯಕ್ಕೆ ವಿಶಿಷ್ಟ ಕೊಡುಗೆಯಾಗಿದೆ.

ಅಡಿಗರಿಗೆ ಪಂಪ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇರಳದ ಕುಮಾರನ್ ಆಶಾನ್ ಪ್ರಶಸ್ತಿ, ಮಧ್ಯಪ್ರದೇಶದ ಕಬೀರ್ ಸಮ್ಮಾನ್ ಪ್ರಶಸ್ತಿಗಳು ದೊರೆತಿವೆ.

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| V. | **ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯುವುದು :** | 1 × 3 = 3 |
| | ಪಠ್ಯಾಂಶಕ್ಕೆ | 2 ಅಂಕಗಳು |
| | ಪದ ಬಳಕೆ ಮತ್ತು ಶೈಲಿ | 1 ಅಂಕ |
| | ಒಟ್ಟು | 3 ಅಂಕಗಳು |
| 34. | ಒಂದೊಂದು ಹೆಜ್ಜೆಯ ಭಾರ<br>ಹೊರುವಾಗ ನಾ<br>ಪಟ್ಟಪಾಡು ನನಗೇ ಗೊತ್ತು<br>ಲೀಲಾಜಾಲವಾಗಿ ಮೇಲೇರಿದ<br>ಇವರಿಗೆ ಭಾರಹೊತ್ತವರ<br>ಕಾಳಜಿಯೇ ಇಲ್ಲ<br>ಆನೆ ಭಾರ ಹೊತ್ತು ಗಟ್ಟಿನೆಲದಲ್ಲಿ ಕಾಲೂರಿನಿಂತ<br>ನನಗೆ ಬೀಳುವ ಭಯವಿಲ್ಲ.<br>***ಉತ್ತರ :***<br>ಏಣಿಯು ಶ್ರಮಿಕರ ಹಾಗೂ ಜನಸಾಮಾನ್ಯರ ಸಂಕೇತವಾಗಿದೆ.ಶ್ರಮಿಕರು, ಜನಸಾಮಾನ್ಯರು ನಿಷ್ಠೆಯಿಂದ ತಮ್ಮ ಜವಾಬ್ದಾರಿಯ ಭಾರವನ್ನು ಹೊತ್ತು ದುಡಿಯುವ ಕಷ್ಟ, ಅವರ ಪಾಡು ಅವರಿಗಷ್ಟೇ ಗೊತ್ತು. ಜನಸಾಮಾನ್ಯರ, ಶ್ರಮಿಕರ ಸಹಾಯವನ್ನು ಪಡೆದು ಸುಲಭವಾಗಿ ಅಧಿಕಾರ, ಅಂತಸ್ತು, ಕೀರ್ತಿ, ಹಣ ಪಡೆದವರಿಗೆ ಇದು ಯಾವುದರ ಬಗ್ಗೆಯೂ ಕಾಳಜಿಯೇ ಇರುವುದಿಲ್ಲ. ಆದರೆ ಶ್ರಮಪಟ್ಟು, ಪರಿಶ್ರಮದಿಂದ ಜವಾಬ್ದಾರಿಯ ಆನೆಭಾರ ಹೊತ್ತು ನಡೆಯಲು ಬಲ್ಲವನು ಸಮಾಜದಲ್ಲಿ ಎಂದಿಗೂ ಗೌರವಯುತವಾಗಿಯೇ ಬದುಕುತ್ತಾನೆ. ಬೀಳುವ ಭಯವಿಲ್ಲ ಎಂಬುದು ಈ ಪದ್ಯದ ಸಾರಾಂಶವಾಗಿದೆ. | |
| VI. | **ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು :** | 1 × 3 = 3 |
| | ಅಲಂಕಾರವನ್ನು ಹೆಸರಿಸುವುದು | 1 ಅಂಕ |
| | ಲಕ್ಷಣ ಮತ್ತು ಸಮನ್ವಯಗೊಳಿಸುವುದು | 2 ಅಂಕಗಳು |
| | ಒಟ್ಟು | 3 ಅಂಕಗಳು |
| 35. | "ಪುಟ್ಟರಾಜರು ಕೋಗಿಲೆಯಂತೆ ಸುಮಧುರವಾಗಿ ಹಾಡುತ್ತಿದ್ದರು."<br>***ಉತ್ತರ :***<br>*ಅಲಂಕಾರದ ಹೆಸರು* : ಉಪಮಾಲಂಕಾರ<br>*ಲಕ್ಷಣ :* ಒಂದು ಮತ್ತೊಂದರಂತೆ ಇದೆ ಎಂದು ಹೋಲಿಸಿ ವರ್ಣಿಸುವುದನ್ನು ಉಪಮಾಲಂಕಾರ ಎನ್ನುತ್ತೇವೆ.<br>*ಉಪಮೇಯ :* ಪುಟ್ಟರಾಜರು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | *ಉಪಮಾನ :* ಕೋಗಿಲೆ | |
| | *ಉಪಮಾವಾಚಕ :* ಅಂತೆ | |
| | *ಸಮಾನಧರ್ಮ :* ಸುಮಧುರವಾಗಿ ಹಾಡುತ್ತಿದ್ದರು | |
| | *ಸಮನ್ವಯ :* ಇಲ್ಲಿ ಪುಟ್ಟರಾಜರು ಎಂಬ ಉಪಮೇಯವನ್ನು ಕೋಗಿಲೆ ಎಂಬ ಉಪಮಾನದ ಮೂಲಕ ಸುಮಧುರವಾಗಿ ಹಾಡುತ್ತಿದ್ದರು ಎಂಬ ಸಮಾನಧರ್ಮವನ್ನು ಅಂತೆ ಎಂಬ ಉಪಮಾವಾಚಕದ ಮೂಲಕ ಪರಸ್ಪರ ಹೋಲಿಸಿ ವರ್ಣಿಸಿರುವುದರಿಂದ ಇದು ಉಪಮಾಲಂಕಾರದ ಉದಾಹರಣೆಯಾಗಿದೆ. | |
| VII. | **ಗಾದೆಯನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಎರಡಕ್ಕೆ ಮಾತ್ರ)** | 2 × 3 = 6 |
| | ಗಾದೆಯ ಮಹತ್ವದ ವಿವರಣೆ | 1 ಅಂಕ |
| | ಉದಾಹರಣೆಯೊಂದಿಗೆ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ–ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 36. | "ಒಗ್ಗಟ್ಟಿನಲ್ಲಿ ಬಲವಿದೆ."<br>**ಅಥವಾ**<br>"ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ." | |
| 37. | "ನಾಲಿಗೆ ಒಳ್ಳೆಯದಾದರೆ ನಾಡೆಲ್ಲ ಒಳ್ಳೆಯದು."<br>**ಅಥವಾ**<br>"ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ." | |
| VIII. | **ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :** | 6 × 3 = 18 |
| | ಕೃತಿ, ಕರ್ತೃ ಮತ್ತು ಪಠ್ಯದ ಹೆಸರು | 1 ಅಂಕ |
| | ಯಾರು–ಯಾರಿಗೆ, ಸಂದರ್ಭ | 1 ಅಂಕ |
| | ಭಾಷಾಶೈಲಿ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 38. | "ಏನಾದರೂ ವರವನ್ನು ಕೇಳು ಕೊಡುತ್ತೇನೆ."<br>***ಉತ್ತರ :***<br>ಈ ವಾಕ್ಯವನ್ನು ಅ.ರಾ. ಮಿತ್ರರವರು ಬರೆದ 'ಮಹಾಭಾರತದ ಪಾತ್ರ ಸಂಗತಿಗಳು' ಪುಸ್ತಕದ 'ಒಣಮರದ ಗಿಳಿ' ಎಂಬ ಪಾಠದಿಂದ ಆರಿಸಲಾಗಿದೆ. ಈ ಮಾತನ್ನು ಇಂದ್ರನು ಗಿಳಿಗೆ ಹೇಳಿದನು.<br>ಮರವು ಒಣಗಿ ನಿಂತ ಕಷ್ಟದ ಸಮಯದಲ್ಲಿ ಆ ಮರವನ್ನು ಬಿಟ್ಟು ಹೋಗದೇ ಅಲ್ಲಿಯೇ ವಾಸವಾಗಿರುವ ಗಿಳಿಯನ್ನು ಕಂಡು ಇಂದ್ರನಿಗೆ ಆಶ್ಚರ್ಯವಾಯಿತು. ಗಿಳಿಯನ್ನು ವಿಚಾರಿಸಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಕೇಳಿದಾಗ ಇಂದ್ರನಿಗೆ ಲೋಕವರ್ತನೆಗಿಂತ ಭಿನ್ನವಾದ ಗಿಳಿಯ ಪರೋಪಕಾರದ ಗುಣ ಮೆಚ್ಚುಗೆಯಾಯಿತು. ಪರೋಪಕಾರಿಯಾದ ಗಿಳಿರಾಯನಿಗೆ ಏನಾದರೂ ವರ ಕೊಡಬೇಕೆಂದು ತೀರ್ಮಾನಿಸಿದ ಇಂದ್ರನು ಈ ಮಾತನ್ನು ಹೇಳಿದನು.<br>ಪರೋಪಕಾರಿಯಾದ ಗಿಳಿಯ ನಡತೆಯ ಬಗೆ ಇಂದ್ರನಿಗೆ ಇರುವ ಮೆಚ್ಚುಗೆ, ಪ್ರೀತಿ ಈ ಮಾತಿನಲ್ಲಿ ವ್ಯಕ್ತವಾಗಿದೆ. | |
| 39. | "ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು."<br>***ಉತ್ತರ :***<br>ಈ ವಾಕ್ಯವನ್ನು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಯವರು ಬರೆದ 'ವ್ಯಕ್ತಿತ್ವ' ಎಂಬ ಪ್ರಬಂಧ ಸಂಕಲನದಿಂದ ಆಯ್ದ ಅಸಿ, ಮಸಿ, ಕೃಷಿ ಎಂಬ ಪಾಠದಿಂದ ಆರಿಸಲಾಗಿದೆ.<br>ಲೇಖಕರು ವ್ಯವಸಾಯದ ಮಹತ್ವವನ್ನು ವಿವರಿಸುತ್ತ ಈ ಮಾತನ್ನು ಹೇಳಿದ್ದಾರೆ. ಅಸಿ, ಮಸಿಗಿಂತ ಮಹತ್ವದ್ದು ಕೃಷಿ. ಕೃಷಿಕ ಈ ನಾಡಿನ ಬೆನ್ನೆಲುಬು. ಒಕ್ಕಲಿಗ ಒಕ್ಕದಿರೆ ಬಿಕ್ಕುವುದು ಜಗವೆಲ್ಲ ಎನ್ನುವ ಮಾತಿದೆ. ಅಂದರೆ ಕೃಷಿಕನೇನಾದರೂ ಸತ್ಯಾಗ್ರಹ ಮಾಡಿ ಒಂದು ವರ್ಷ ಬೆಳೆ ಬೆಳೆಯುವುದಿಲ್ಲ ಎಂದು ತೀರ್ಮಾನ ಮಾಡಿದರೆ ಗತಿಯೇನು. ಬರೀ ವೈಜ್ಞಾನಿಕ ಬೆಳವಣಿಗೆಯಿಂದ ಬದುಕಲು ಸಾಧ್ಯವಿಲ್ಲ. ಯಾವ ಕಾರ್ಖಾನೆಯಿಂದಲೂ ಅಕ್ಕಿ ತಯಾರಿಸಲು, ಟೊಮೊಟೋ ತಯಾರಿಸಲು ಸಾಧ್ಯವಿಲ್ಲ. ಇವಕ್ಕೆಲ್ಲ ಭೂಮಿಯೇ ಬೇಕು. ರೈತನ ಬೆವರು ಭೂಮಿಗೆ ಸುರಿಯಬೇಕು.<br>ಲೇಖಕರ ಈ ಮಾತಿನಲ್ಲಿ 'ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆಯೇ ಮೇಲು' ಎಂಬ ವ್ಯವಸಾಯದ ಮಹತ್ವ ವ್ಯಕ್ತವಾಗಿದೆ. | |
| 40. | "ನೀವೇ ಕಾಫಿ ಹಾಕಿಕೊಳ್ಳಿ, ಆಮೇಲೆ ಕುಳಿತು ಮಾತನಾಡೋಣ."<br>***ಉತ್ತರ :***<br>ಈ ವಾಕ್ಯವನ್ನು ಗುರುರಾಜ ಕರ್ಜಗಿಯವರು ಬರೆದ 'ಕರುಣಾಳು ಬಾ ಬೆಳಕೆ' ಎಂಬ ಪುಸ್ತಕದ 'ಕಾಫಿ ಕಪ್ಪು' ಎಂಬ ಪಾಠದಿಂದ ಆರಿಸಲಾಗಿದೆ.<br>ಗುರುಗಳು ಹಳೆಯ ವಿದ್ಯಾರ್ಥಿಗಳಿಗೆ ಈ ಮಾತನ್ನು ಹೇಳಿದರು. ಹಳೆಯ ವಿದ್ಯಾರ್ಥಿಗಳು ಗುರುಗಳನ್ನು ನೋಡಲು ಅವರ ಮನೆಗೆ ಬಂದಿದ್ದರು. ಗುರುಗಳು ಸಂತೋಷದಿಂದ ಅವರನ್ನು ಬರಮಾಡಿಕೊಂಡು ಕೂರಿಸಿ ಮಾತನಾಡಿಸುತ್ತಿದ್ದರು. ಹಾಗೆಯೇ ತನ್ನ ಕೈ ಕಾಫಿ, ರುಚಿ ಕೂಡ ಚೆನ್ನಾಗಿರುತ್ತದೆಂದು ಹೇಳಿ ಹತ್ತೇ ನಿಮಿಷದಲ್ಲಿ ದೊಡ್ಡ ಪಾತ್ರೆಯಲ್ಲಿ ಬಿಸಿ ಬಿಸಿ ಕಾಫಿ ಮಾಡಿ ತಂದು, ಹಾಗೆಯೇ ಕಪ್ಪುಗಳನ್ನು ತಂದಿಟ್ಟು ಈ ಮೇಲಿನಂತೆ ನುಡಿದರು.<br>ಈ ಮಾತಿನಲ್ಲಿ ವಿದ್ಯಾರ್ಥಿಗಳ ಬಗೆಗಿನ ಕಾಳಜಿ, ಪ್ರೀತಿ, ಗುರುಶಿಷ್ಯರ ನಿಕಟ ಬಾಂಧವ್ಯ ವ್ಯಕ್ತವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 41. | "ಅಮ್ಮನ ಮಾತು ಸುಳ್ಳಾಗಲಾರದು"<br>***ಉತ್ತರ :***<br>ಈ ವಾಕ್ಯವನ್ನು ಕುವೆಂಪುರವರು ಬರೆದ 'ನನ್ನ ಗೋಪಾಲ' ಎಂಬ ಕೃತಿಯ 'ನನ್ನ ಗೋಪಾಲ' ಎಂಬ ನಾಟಕದಿಂದ ಆಯ್ದುಕೊಳ್ಳಲಾಗಿದೆ.<br>ಗೋಪಾಲನು ಹೇಳುವ ಮಾತು ಇದು. ಸಂಜೆಯ ಸಮಯದಲ್ಲಿ ಶಾಲೆಯಿಂದ ಮರಳುವಾಗ ಕಾಡಿನಲ್ಲಿ ಒಬ್ಬನಿಗೇ ಭಯವಾಗುತ್ತಿತ್ತು. ಆಗ ಅವನಿಗೆ ಅಮ್ಮನು ಹೇಳಿದ ಮಾತು ನೆನಪಾಯಿತು. ಕಾಡಿನಲ್ಲಿ ಬನದ ಗೋಪಾಲನಿರುತ್ತಾನೆ. ಅವನು ನಿನ್ನ ಅಣ್ಣ ಭಯವಾದಾಗ ಅವನನ್ನು ಕರೆ ಎಂದು ಹೇಳಿದ್ದಳು. ಅದರಂತೆ ಅವನು "ಅಣ್ಣಾ ಎಲ್ಲಿದ್ದೀಯಾ" ಎಂದು ಮೂರು-ನಾಲ್ಕು ಬಾರಿ ಕರೆದ. ಬನದ ಗೋಪಾಲನು ಬರಲಿಲ್ಲ. ಆದರೆ ಅಣ್ಣ ಬರುತ್ತಾನೆಂಬ ನಂಬಿಕೆಯಿಂದ ಕಾಯುತ್ತಿದ್ದ ಗೋಪಾಲನಿಗೆ ಅಮ್ಮನ ಮಾತಿನ ಮೇಲೆ ಭರವಸೆಯಿತ್ತು.<br>ಮುಗ್ಧ ಮಕ್ಕಳಿಗೆ ತಾಯಿಯ ಮಾತಿನಲ್ಲಿ ಸಿಗುವ ಭರವಸೆ, ಕಾಳಜಿ, ವಾತ್ಸಲ್ಯ ಗೋಪಾಲನ ಈ ಮಾತಿನಲ್ಲಿ ವ್ಯಕ್ತವಾಗಿದೆ. | |
| 42. | "ಪರಹಿತಕೆ ಬಳಲುತಿರಲದುವೆ ಜೀವನವು"<br>***ಉತ್ತರ :***<br>ಈ ವಾಕ್ಯವನ್ನು ಎಂ. ಗೋಪಾಲಕೃಷ್ಣ ಅಡಿಗರು ಬರೆದ 'ಸಮಗ್ರಕಾವ್ಯ'ದಿಂದ ಆಯ್ದ 'ಗುರಿ' ಎಂಬ ಪದ್ಯದಿಂದ ಆರಿಸಲಾಗಿದೆ.<br>ಕವಿಯ ಪ್ರಕಾರ ಮಾನವರಾದ ನಾವು ನರನಲ್ಲಿ ನಾರಾಯಣನ ರೂಪವನ್ನು ಕಾಣಬೇಕು. ಸ್ವರ್ಗದ ಸುಖ ಭೋಗಕ್ಕೆ ಆಸೆಪಡದೇ ಸದಾ ಪರರ ಹಿತಕ್ಕಾಗಿ ದುಡಿದಾಗ ಅದರಿಂದ ಸಿಗುವ ಸುಖ, ಸಂತೋಷ ಎಲ್ಲಕ್ಕಿಂತ ಮಿಗಿಲು. ಅದುವೇ ನಿಜವಾದ ಜೀವನ ಎಂಬುದು ಕವಿಯ ಅಭಿಪ್ರಾಯವಾಗಿದೆ.<br>ಪರರ ಒಳಿತಿಗಾಗಿ ದುಡಿಯುವಲ್ಲಿ ನಿಜವಾದ ಜೀವನದ ಮೌಲ್ಯವಿದೆ ಎಂಬುದು ಕವಿಯ ಈ ಮಾತಿನಲ್ಲಿ ವ್ಯಕ್ತವಾಗಿದೆ. | |
| 43. | "ಶಿವಶಿವ ಕಾದಿಗೆಲಿದೆವು"<br>***ಉತ್ತರ :***<br>ಈ ವಾಕ್ಯವನ್ನು ಕುಮಾರವ್ಯಾಸನು ಬರೆದ 'ಕರ್ಣಾಟಕ ಭಾರತ ಕಥಾಮಂಜರಿ' ಅಥವಾ 'ಗದುಗಿನ ಭಾರತ'ದಿಂದ ಆಯ್ದ 'ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.<br>ಕೌರವರ ಬಲಗಡಲಿನಂತೆ (ವಿಶಾಲ ಸಾಗರ) ಇರುವ ಸೇನೆಯನ್ನು ನೋಡಿ ಉತ್ತರನು ಹೇಳುವ ಮಾತು ಇದು. ಮಹಾಸೇನಾ ಸಾಗರದಂತೆ ಕಾಣುವ ಕೌರವರ ಸೇನೆಯೊಂದಿಗೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಸಾಕ್ಷಾತ್ ಶಿವನೇ ಬಂದು ಕಾದಾಡಬೇಕೇ ಹೊರತು ತಮ್ಮಿಂದ ಸಾಧ್ಯವಾಗಲಾರದು ಎಂಬುದು ಉತ್ತರನ ಅಭಿಪ್ರಾಯವಾಗಿತ್ತು. ಸೇನೆಯನ್ನು ನೋಡಿದ ಉತ್ತರನಲ್ಲಿ ಇರುವ ಭಯ, ಆತಂಕ ಈ ಮಾತಿನಲ್ಲಿ ವ್ಯಕ್ತವಾಗಿದೆ. | |
| IX. | **ಪದ್ಯಭಾಗ ಪೂರ್ಣಗೊಳಿಸಿ ಬರೆಯುವುದು :**<br>**(ತಪ್ಪಿಲ್ಲದೆ ಬರೆದ ಪೂರ್ಣಸಾಲುಗಳಿಗೆ ಒಟ್ಟಾರೆ ನಾಲ್ಕು ಅಂಕಗಳು)** | 1 × 4 = 4 |
| 44. | ಏಕಾಂಗಿ ವೀರನಂತೆ ..........................................<br>..................................................................<br>..................................................................<br>.......................................... ಕತ್ತಲಲ್ಲಿ ನಡೆದನು.<br>**ಅಥವಾ**<br>ಕಾಡು ಕಾಡು ಅಲೆದ ........................................<br>..................................................................<br>..................................................................<br>................................ ಮಹಾಬೆಳಕೊಂದು ಕಂಡಿತು.<br>***ಉತ್ತರ :***<br>ಏಕಾಂಗಿ ವೀರನಂತೆ ಮಧ್ಯರಾತ್ರಿ ಎದ್ದನು<br>ಮಡದಿ ಮಗುವ ತೊರೆದನವನು ಅಡವಿ ದಾರಿ ಹಿಡಿದನು।<br>ಅರಮನೆಯ ಮೋಹವನ್ನು ಹರಿದುಹಾಕಿ ಹೋದನು<br>ಗೊತ್ತು ಗುರಿಯು ಇಲ್ಲದಂತೆ ಕತ್ತಲಲ್ಲಿ ನಡೆದನು<br>**ಅಥವಾ**<br>ಕಾಡು ಕಾಡು ಅಲೆದ ಅವಗೆ ನಾಡಿನರ್ಥ ಹೊಳೆಯಿತು<br>ಕೋಗಿಲೆಯ ಹಾಡದೊಂದು ದೂರದಿಂದ ಕೇಳಿತು ।<br>ಬೆಳ್ಳಿಚುಕ್ಕಿ ಬಾನಿನಲ್ಲಿ ಆಗತಾನೆ ಬೆಳಗಿತು<br>ಬೋಧಿವೃಕ್ಷದಲ್ಲಿ ಮಹಾಬೆಳಕೊಂದು ಕಂಡಿತು ॥ | |
| X. | **ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | 1 × 4 = 4 |
| | ವಿಷಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿ, ಪದ ಬಳಕೆಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 45. | ಮೂಡಲ್ ಕುಣಿಗಲ್ ಕೆರೆಯ ಭಾವಾರ್ಥವನ್ನು ನೀವು ಮೆಚ್ಚುವ ರೀತಿಯಲ್ಲಿ ಬಣ್ಣಿಸಿ.<br>**ಅಥವಾ**<br>ಮೂಡಲ್ ಕುಣಿಗಲ್ ಕೆರೆ ಜೀವಸಂಕುಲಕ್ಕೆ ಹೇಗೆ ಆಶ್ರಯವಾಗಿದೆ ಎಂದು ವರ್ಣಿಸಿ.<br>***ಉತ್ತರ :***<br>ಮೂಡಲ್ ಕುಣಿಗಲ್ ಕೆರೆಯು ನೋಡುಗರಿಗೆ ಒಂದು ವೈಭೋಗವೋ ಎಂಬಂತೆ ಇತ್ತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಸಂತೆ ಹಾದಿಯ ಸುಂದರ ಕಲ್ಲುಕಟ್ಟೆಯಿಂದ ಕಂಗೊಳಿಸುತ್ತ ಕೆರೆಯಲ್ಲಿ ಮೂಡಿ ಬರುವ ಚಂದ್ರಮನ ಬಿಂಬದಿಂದ ನೋಡುಗರ ಕಣ್ಮನ ಸೆಳೆಯುವಂತೆ ಇತ್ತು.<br><br>ಬಾಳೆಯ ಹಣ್ಣಿನಂತೆ ಸುಂದರವಾಗಿ ಬಾಗಿರುವ ಈ ಕೆರೆಯು ನಿಂಬೆಯ ಹಣ್ಣಿನಂತೆ ಮೈದುಂಬಿಕೊಂಡು ಬಾಗಿನ ಅರ್ಪಿಸಲು ಭಾವ ತಂದಿರುವ ಬಣ್ಣದ ಸೀರೆಯನ್ನು ನೆನಪಿಸುವಂತೆ ಇತ್ತು.<br><br>ತುಂಬಿದ ಕೆರೆಯಲ್ಲಿ ಮೀನುಗಾರರು ಊರುಗೋಲು ಹಾಕಿದಾಗ ಅತ್ತಿಂದಿತ್ತ ಕೊಬ್ಬಿದ ಬಾಳೆ ಮೀನುಗಳು ಗಾಬರಿಗೊಂಡು ಓಡಾಡುವ ರೀತಿ, ಜಲಚರಗಳನ್ನು ತಿನ್ನಲು ಕಬ್ಬಕ್ಕಿಗಳ ಕಾತುರತೆ ನೋಡಲು ಬಲು ಸುಂದರ. ಸುತ್ತಲಿನ ಗಿಡಮರಗಳ ಸೌಂದರ್ಯ ಹಾಗೂ ಹಸಿರಿನ ಸಮೃದ್ಧಿಯಲ್ಲಿ ನಗುವ, ನಲಿಯುವ ಗುಬ್ಬಿ ಸಾರಂಗಗಳು ಕೆರೆಯ ಸೌಂದರ್ಯವನ್ನು ಇಮ್ಮಡಿಗೊಳಿಸಿ ನೋಡುಗರಿಗೆ ಮುದ ನೀಡುವಂತಿತ್ತು. ಈ ಅಂದವನ್ನು ನೋಡಲು ಸಾಕ್ಷಾತ್ ಶಿವನೇ ಬಂದರೂ ಆಶ್ಚರ್ಯವಿಲ್ಲ ಎಂದು ಜನಪದರು ಮೂಡಲ್ ಕುಣಿಗಲ್ ಕೆರೆಯ ಸೌಂದರ್ಯವನ್ನು ವರ್ಣಿಸುತ್ತಾರೆ.<br><br>**ಅಥವಾ**<br><br>ಮೂಡಲ್ ಕುಣಿಗಲ್ ಕೆರೆಯು ನೋಡುಗರ ಕಣ್ಮನ ಸೆಳೆಯುವ ವೈಭೋಗವೆಂಬಂತೆ ಇದ್ದು ಕೆರೆಯಲ್ಲಿ ಮೂಡಿ ಬರುವ ಚಂದ್ರಮನ ಬಿಂಬ ಬೆರಗುಗೊಳಿಸುವಂತಿದೆ.<br><br>ನಿಂಬೆಯ ಹಣ್ಣಿನಂತೆ ಮೈದುಂಬಿಕೊಂಡ ಕೆರೆಯ ನೀರಲ್ಲಿ ಕೊಬ್ಬಿ ಬೆಳೆದ ಬಾಳೆಯ ಮೀನುಗಳಿವೆ. ಆ ಬಾಳೆಯ ಮೀನುಗಳನ್ನು ತಿನ್ನಲು ಕಬ್ಬಕ್ಕಿಗಳು ಕಾತರದಿಂದ ಕಾಯುತ್ತಿರುತ್ತವೆ.<br><br>ಮೀನುಗಾರರು ಹಾಕುವ ಊರುಗೋಲಿಗೆ ಹೆದರಿ ಗಾಬರಿಯಾಗುವ ಮೀನುಗಳು ಭಯದಿಂದ ಬೊಬ್ಬೆ ಹೊಡೆಯುತ್ತವೆ. ಈ ದೃಶ್ಯವನ್ನು ಕಂಡು ಕೆರೆಯ ದಂಡೆಯಲ್ಲಿ ವಾಸವಿರುವ ಗುಬ್ಬಿ, ಸಾರಂಗಗಳು ನಕ್ಕು ನಲಿಯುತ್ತವೆ. ಮೂಡಲ್ ಕುಣಿಗಲ್ ಕೆರೆಯು ಸಮೃದ್ಧವಾದ ನೀರಿನಿಂದ ಸುತ್ತಲಿನ ವಾತಾವರಣವನ್ನು ಸಮೃದ್ಧಗೊಳ್ಳುವಂತೆ ಮಾಡಿದೆ. ಸಂಪದ್ಭರಿತವಾಗಿ ಬೆಳೆದ ಗಿಡಮರಗಳು ಗುಬ್ಬಿ, ಸಾರಂಗಗಳ ಆಶ್ರಯದಾಣವಾಗಿದ್ದು, ಇನ್ನು ತುಂಬಿದ ಕೆರೆಯು ಕೊಬ್ಬಿದ ಬಾಳೆಯ ಮೀನುಗಳ ಆಗರವಾಗಿದ್ದು ಸುತ್ತಲಿನ ಕಬ್ಬಕ್ಕಿ ಹಾಗೂ ಚಲಚರಗಳ ಕಾತರತೆಗೂ ಕಾರಣವಾಗಿದ್ದವು. ಒಟ್ಟಿನಲ್ಲಿ ಸಮೃದ್ಧವಾದ ಕೆರೆಯು ಹಲವಾರು ಜೀವಸಂಕುಲಗಳ ಆಶ್ರಯದಾಣವಾಗಿದೆ ಎಂದು ಹೇಳಬಹುದು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| XI. | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು :** <br> **(ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)** | $1 \times 4 = 4$ <br> ( 2 + 2 ) |
| 46. | ನಾಡಿನ ಜಲಸಂಪನ್ಮೂಲಗಳಲ್ಲಿ ನದಿಗಳ ಪಾತ್ರ ಮಹತ್ವದ್ದಾಗಿದೆ. ಇವು ನೀಡುವ ಪ್ರಯೋಜನ ಅಧಿಕ. ನದಿ ಕೇವಲ ಹರಿಯುವ ನೀರಲ್ಲ. ಅದೊಂದು ಪ್ರವಾಹ ಶಕ್ತಿ. ಪ್ರಕೃತಿಯ ವರಪ್ರಸಾದ. ಸಸ್ಯ, ಪ್ರಾಣಿ ಮತ್ತು ಮಾನವ ಜಗತ್ತಿನ ಜೀವನಕ್ಕೆ ಆಧಾರ. ಕರ್ನಾಟಕ ಸುಂದರ ನದಿಗಳ ನಾಡು. ಕಾವೇರಿ, ಕೃಷ್ಣಾ, ತುಂಗಭದ್ರೆ, ಶರಾವತಿ ಮೊದಲಾದ ನದಿಗಳು ನಾಡಿನ ಭಾಗ್ಯಕ್ಕೆ ಕಾರಣವಾಗಿವೆ. ಸಮೃದ್ಧವಾದ ಬೆಳೆಗೆ, ಜಲವಿದ್ಯುತ್ ಯೋಜನೆಗಳಿಗೆ, ಆರ್ಥಿಕ ವಿಕಾಸಕ್ಕೆ, ಜನತೆಯ ನೆಮ್ಮದಿಯ ಜೀವನಕ್ಕೆ ಪ್ರಯೋಜನಕಾರಿಯಾಗಿದೆ. <br><br> ಪಶ್ಚಿಮ ಘಟ್ಟಗಳ ತಪ್ಪಲಿನಲ್ಲಿ ಹರಿಯುವ ನದಿಗಳಲ್ಲಿ ಶರಾವತಿಯೂ ಒಂದು. ಇದು ಕೇವಲ 132 ಕಿ.ಮೀ. ಉದ್ದವಿರುವ ನದಿ. ಆದರೆ ತನ್ನ ಅಪಾರ ಜಲನಿಧಿಯಿಂದ ನಾಡಿನ ಅಕ್ಷಯ ನಿಧಿಯೆನಿಸಿದೆ. ಅಂಬುತೀರ್ಥದಲ್ಲಿ ಹುಟ್ಟಿದ ಶರಾವತಿ ನದಿ ಉಪನದಿಗಳೊಂದಿಗೆ ಬೆಟ್ಟ ಕಣಿವೆಗಳಲ್ಲಿ ಹರಿಯುತ್ತ ಶಿವಮೊಗ್ಗ ಜಿಲ್ಲೆಯ ಜೋಗ ಎಂಬಲ್ಲಿ 253 ಮೀ. ಆಳದ ಕಮರಿಗೆ ಧುಮುಕುತ್ತದೆ. ಅದೇ ಲೋಕವಿಖ್ಯಾತ ಜೋಗ ಜಲಪಾತ. ನೋಡಲು ಬಲುಸುಂದರ. ಇಲ್ಲಿ ನಾಲ್ಕು ಕವಲಾಗಿ ಧುಮುಕುತ್ತದೆ. ಇದು ಧುಮುಕುವ ವೈಖರಿಯನ್ನು ಕಂಡು ಬ್ರಿಟಿಷರು ರಾಜಾ, ರೋರರ್, ರಾಕೆಟ್, ಲೇಡಿ ಎಂದು ಕರೆದರು. ರಾಜಾ ಒಂದು ಅಖಂಡ ಜಲಧಾರೆ. ಮೇಲಿನಿಂದ ಕೆಳಕ್ಕೆ ಒಂದೇ ಸಮನೆ ಧುಮುಕುತ್ತದೆ. ಎರಡನೆಯ ಕವಲು ಬಂಡೆಯನ್ನು ಕೊರೆದು ಘರ್ಜನೆ ಮಾಡುವುದರಿಂದ ರೋರರ್, ಮೂರನೆಯದು ಬಾಣದಂತೆ ಚಿಮ್ಮಿ ನೀರ, ನೊರೆಗಳ ಮೊತ್ತವುಂಟುಮಾಡುವುದರಿಂದ ರಾಕೆಟ್, ನಾಲ್ಕನೆಯದು ಶ್ವೇತವಸ್ತ್ರಧಾರಿಯಾದ ರಮಣಿ ಬಳ್ಳಿಯಂತೆ ಬಳುಕುತ್ತ ಇಳಿದು ಬರುವುದರಿಂದ ಲೇಡಿ. <br><br> ಕವಿಗಳೂ, ಲಾವಣಿಕಾರರೂ ಈ ಸೌಂದರ್ಯವನ್ನು ಮನದಣಿಯೆ ಹಾಡಿ ಹೊಗಳಿದ್ದಾರೆ. <br><br> ಪ್ರಶ್ನೆಗಳು *:* <br> ಅ) ಜೋಗ್‌ನಲ್ಲಿ ಕವಲುಗಳಾಗಿ ಧುಮುಕುವ ಜಲಸಿರಿಯ ವೈಖರಿಯನ್ನು ಬ್ರಿಟಿಷರು ಹೇಗೆ ವರ್ಣಿಸಿದ್ದಾರೆ ? <br> ಬ) ನಮ್ಮ ನಾಡಿನ ಜಲಸಂಪನ್ಮೂಲಗಳು ಹೇಗೆ ಪ್ರಯೋಜನಕಾರಿಯಾಗಿವೆ ? | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | *ಉತ್ತರ :* | |
| | ಅ) ಜೋಗವು ಧುಮುಕುವ ವೈಖರಿಯನ್ನು ಕಂಡು ಬ್ರಿಟಿಷರು ರಾಜಾ, ರೋರರ್, ರಾಕೆಟ್, ಲೇಡಿ ಎಂದು ಕರೆದರು. ರಾಜಾ ಒಂದು ಅಖಂಡ ಜಲಧಾರೆ. ಮೇಲಿನಿಂದ ಕೆಳಕ್ಕೆ ಒಂದೇ ಸಮನೆ ಧುಮುಕುತ್ತದೆ. ಎರಡನೆಯ ಕವಲು ಬಂಡೆಯನ್ನು ಕೊರೆದು ಘನಗರ್ಜನೆ ಮಾಡುವುದರಿಂದ ರೋರರ್, ಮೂರನೆಯದು ಬಾಣದಂತೆ ಚಿಮ್ಮಿ ನೀರ, ನೊರೆಗಳ ಮೊತ್ತವುಂಟುಮಾಡುವುದರಿಂದ ರಾಕೆಟ್, ನಾಲ್ಕನೆಯದು ಶ್ವೇತವಸ್ತ್ರಧಾರಿಯಾದ ರಮಣಿ ಬಳುಕುತ್ತ ಇಳಿದು ಬರುವಂತೆ ಇರುವುದರಿಂದ ಲೇಡಿ ಎಂದು ಹೆಸರಿಸಿದರು. | |
| | ಬ) ನಮ್ಮ ನಾಡಿನ ಜಲಸಂಪನ್ಮೂಲಗಳಲ್ಲಿ ನದಿಗಳ ಪಾತ್ರ ಮಹತ್ವದ್ದಾಗಿದೆ. ಇವು ನೀಡುವ ಪ್ರಯೋಜನ ಅಧಿಕ. ನದಿ ಕೇವಲ ಹರಿಯುವ ನೀರಲ್ಲ. ಅದೊಂದು ಪ್ರವಾಹ ಶಕ್ತಿ. ಪ್ರಕೃತಿಯ ವರಪ್ರಸಾದ. ಸಸ್ಯ, ಪ್ರಾಣಿ ಮತ್ತು ಮಾನವ ಜಗತ್ತಿನ ಜೀವನಕ್ಕೆ ಆಧಾರ. ಕರ್ನಾಟಕ ಸುಂದರ ನದಿಗಳ ನಾಡು. ಕಾವೇರಿ, ಕೃಷ್ಣ, ತುಂಗಭದ್ರೆ, ಶರಾವತಿ ಮೊದಲಾದ ನದಿಗಳು ನಾಡಿನ ಭಾಗ್ಯಕ್ಕೆ ಕಾರಣವಾಗಿವೆ. ಸಮೃದ್ಧವಾದ ಬೆಳೆಗೆ, ಜಲವಿದ್ಯುತ್ ಯೋಜನೆಗಳಿಗೆ, ಆರ್ಥಿಕ ವಿಕಾಸಕ್ಕೆ, ಜನತೆಯ ನೆಮ್ಮದಿಯ ಜೀವನಕ್ಕೆ ಪ್ರಯೋಜನಕಾರಿಯಾಗಿದೆ. | |
| XII. | **ಪ್ರಬಂಧ ಬರೆವಣಿಗೆ : (ಯಾವುದಾದರೂ ಒಂದಕ್ಕೆ ಮಾತ್ರ)** | $1 \times 4 = 4$ |
| | ಪೀಠಿಕೆ / ಪ್ರಸ್ತಾವನೆ | 1 ಅಂಕ |
| | ವಿಷಯ ನಿರೂಪಣೆ | 2 ಅಂಕಗಳು |
| | ಭಾಷಾಶೈಲಿಗೆ, ಮುಕ್ತಾಯ / ಉಪಸಂಹಾರ | 1 ಅಂಕ |
| | ಒಟ್ಟು | 4 ಅಂಕಗಳು |
| 47. | ವಾಯುಮಾಲಿನ್ಯದಿಂದಾಗುವ ಪರಿಣಾಮಗಳು. | |
| | ***ಅಥವಾ*** | |
| | ದೂರದರ್ಶನದಿಂದಾಗುವ ಪ್ರಯೋಜನಗಳು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| XIII. | **ಪತ್ರ ಲೇಖನ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | 1 × 5 = 5 |
| 48. | ನಿಮ್ಮನ್ನು ಹಾವೇರಿಯ ಸರ್ಕಾರಿ ಪ್ರೌಢಶಾಲೆಯ 'ತೇಜಸ್' ಎಂದು ಭಾವಿಸಿಕೊಂಡು, ಶಾಲೆಯ ಕೈತೋಟಕ್ಕೆ ಗಿಡಗಳನ್ನು ನೀಡುವಂತೆ ಕೋರಿ ತೋಟಗಾರಿಕೆ ಇಲಾಖೆಯ ಅಧಿಕಾರಿಗಳಿಗೆ ಮನವಿ ಪತ್ರವನ್ನು ಬರೆಯಿರಿ. | |
| | **ಅಥವಾ** | |
| | ನಿಮ್ಮನ್ನು ಬಾಗೇಪಲ್ಲಿ ಸರ್ಕಾರಿ ಪ್ರೌಢಶಾಲೆಯ 'ಸೀಮಾ' ಎಂದು ಭಾವಿಸಿಕೊಂಡು, ಮಾಸ್ಕ್ ಧರಿಸುವ ಅಗತ್ಯತೆಯನ್ನು ತಿಳಿಸಿ, ಸರ್ಕಾರಿ ಪ್ರೌಢಶಾಲೆ, ಚಿಂತಾಮಣಿಯಲ್ಲಿರುವ 'ಪ್ರತಿಮಾ' ಎಂಬ ಹೆಸರಿನ ಗೆಳತಿಗೆ ಪತ್ರವನ್ನು ಬರೆಯಿರಿ. | |
| | ***ಉತ್ತರ :*** | |
| | ವ್ಯಾವಹಾರಿಕ ಪತ್ರ *:* | |
| | ಇಂದ ವಿಳಾಸ, ಗೆ ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಸ್ಥಳ, ದಿನಾಂಕ | 1 ಅಂಕ |
| | ವಿನ್ಯಾಸ, ಪದಬಳಕೆ, ಶೈಲಿ | 1 ಅಂಕ |
| | ಒಟ್ಟು | 5 ಅಂಕಗಳು |
| | **ಅಥವಾ** | |
| | ವೈಯಕ್ತಿಕ ಪತ್ರ *:* | |
| | ಇಂದ ವಿಳಾಸ, ಸ್ಥಳ, ದಿನಾಂಕ, ಪ್ರಾರಂಭದ ಒಕ್ಕಣೆ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಗೆ ವಿಳಾಸ | 1 ಅಂಕ |
| | ವಿನ್ಯಾಸ, ಪದಬಳಕೆ, ಶೈಲಿ | 1 ಅಂಕ |
| | ಒಟ್ಟು | 5 ಅಂಕಗಳು |